## ಶ್ರೀ ನರೇಂದ್ರ ಮೋದಿ ನಾಯಕತ್ವದ ಕೇಂದ್ರ ಸರ್ಕಾರವು ಜಾರಿಗೆ ತಂದ ಪ್ರಮುಖ ಯೋಜನೆಗಳು



### ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆ

ಲಿಂಗ ಆಧಾರಿತ ಭ್ರೂಣ ಆಯ್ಕೆಯ ಪ್ರವೃತ್ತಿಗೆ ಸಂಪೂರ್ಣ ತಡೆ; ಹೆಣ್ಣುಮಕ್ಕಳ ಉಳಿವು ಮತ್ತು ರಕ್ಷಣೆಗೆ ತೀವ್ರ ಕ್ರಮಗಳು; ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿಕೆ; ಜನನಕಾಲದ ಲಿಂಗ ಅನುಪಾತವನ್ನು 100 ಲಿಂಗ ಸೂಕ್ಷ್ಮ ಜಿಲ್ಲೆಗಳಲ್ಲಿ 10 ಅಂಕಗಳಿಗೆ ಹೆಚ್ಚಿಸುವುದು; 5 ವರ್ಷದೊಳಗಿನ ದುರ್ಬಲ ಮತ್ತು ಇಳಿತೂಕದ ಹೆಣ್ಣುಮಕ್ಕಳಿಗೆ ಪೌಷ್ಟಿಕಾಂಶಗಳ ಪ್ರಮಾಣ ಹೆಚ್ಚಳ; ಶಾಲೆಗಳಲ್ಲಿ ಹೆಣ್ಣುಮಕ್ಕಳ ಹಾಜರಿ ಹೆಚ್ಚಳ; ಸೆಕೆಂಡರಿ ಶಿಕ್ಷಣದಲ್ಲಿ ಈಗಿನ ಶೇ. 76ರಿಂದ ಶೇ. 79ಕ್ಕೆ ನೋಂದಣಿ ಹೆಚ್ಚಳ.

### ಪ್ರಧಾನ ಮಂತ್ರಿ ಉಜ್ವಲಾ ಯೋಜನೆ

ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಕಾಪಾಡಲು ಹೊಗೆಮುಕ್ತ ವಸತಿ ರೂಪಿಸಲು 5 ಕೋಟಿ ಮನೆಗಳಿಗೆ ಎಲ್‌ಪಿಜಿ ಸೌಲಭ್ಯ ಒದಗಿಸುವ ಮಹತ್ವದ ಯೋಜನೆ. ಇದುವರೆಗೆ (ಆಗಸ್ಟ್ 2017) 2.66 ಕೋಟಿ (ಬಡತನದ ರೇಖೆಯಿಂದ ಕೆಳಗಿರುವ) ಮನೆಗಳಿಗೆ ಈ ರೀತಿಯ ಎಲ್‌ಪಿಜಿ ಸೌಲಭ್ಯ ನೀಡಲಾಗಿದೆ.

### ಸುಕನ್ಯಾ ಸಮೃದ್ಧಿ ಖಾತೆ



ಅಂಚೆ ಇಲಾಖೆಯಲ್ಲಿ ಹೆಣ್ಣುಮಕ್ಕಳಿಗಾಗಿ ಶೇ. 9.2ರ ವಾರ್ಷಿಕ ಬಡ್ಡಿ ದರದಲ್ಲಿ ವಾರ್ಷಿಕವಾಗಿ ಕಂಪೌಂಡ್ ಆಗುವ ಬಡ್ಡಿ ಇರುವ ಖಾತೆ. ಹೆಣ್ಣುಮಗುವಿನ ಹೆಸರಿನಲ್ಲಿ ಯಾವುದೇ ಕಾನೂನಾತ್ಮಕ ಪಾಲಕರು, ಪೋಷಕರು ಖಾತೆ ತೆರೆಯಬಹುದು. ಇಬ್ಬರು ಹೆಣ್ಣುಮಕ್ಕಳಿಗಾಗಿ ಎರಡು ಖಾತೆ ತೆರೆಯಬಹುದು.

### ಪಹಲ್: ಎಲ್‌ಪಿಜಿ ಗ್ರಾಹಕರಿಗೆ ನೇರ ಲಾಭ ವರ್ಗಾವಣೆ ಯೋಜನೆ

ಗ್ರಾಹಕರು ಈ ಯೋಜನೆಯನ್ನು ಸೇರಲು ಒಂದು ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. ಅವರು ಎಲ್‌ಪಿಜಿ ಸಬ್ಸಿಡಿಯನ್ನು ಪಡೆಯುತ್ತಿರಬೇಕು. ಗ್ರಾಹಕರು ಮೊದಲ ಸಲ ಎಲ್‌ಪಿಜಿ ಸಿಲಿಂಡರನ್ನು ಖರೀದಿಸುವಾಗ ಒಂದು ಸಲದ ಮುಂಗಡ ಪಾವತಿಯನ್ನು ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆಯುತ್ತಾರೆ. ಗ್ರಾಹಕರು ತಮ್ಮ ಸಬ್ಸಿಡಿ ಅರ್ಹತೆಯ ಆಧಾರದ ಮೇರೆಗೆ ಈ ಸಬ್ಸಿಡಿಯನ್ನು ಪಡೆಯುತ್ತಾರೆ.

### ಮಣ್ಣಿನ ಆರೋಗ್ಯ ಕಾರ್ಡ್ ಯೋಜನೆ

ಮಣ್ಣಿನ ಆರೋಗ್ಯ ಕಾರ್ಡ್ ಮೂಲಕ ರೈತರ ಹೊಲಗಳ ಮಣ್ಣಿನ ಗುಣಮಟ್ಟವನ್ನು ವೈಜ್ಞಾನಿಕವಾಗಿ ಪರೀಕ್ಷೆ ಮಾಡಲಾಗುವುದು. ಮಣ್ಣಿನ ಜಲಪ್ರಮಾಣ, ಸಸ್ಯಧಾರಣೆ ಮತ್ತಿತರೆ ಜೈವಿಕ ಗುಣಗಳನ್ನು ಅರಿಯಲಾಗುವುದು. ರೈತರ ಕ್ಷೇತ್ರಾನುಭವದಿಂದ ಮತ್ತು ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳ ಅಪಾರ ಜ್ಞಾನದ ನೆರವಿನಿಂದಲೇ ಈ ಕಾರ್ಡ್‌ನ್ನು ರೂಪಿಸಲಾಗುತ್ತದೆ. ಈ ಕಾರ್ಡ್ ನೆರವಿನಿಂದ ಯಾವ ಮಣ್ಣಿನಲ್ಲಿ ಎಂಥ ಬೆಳೆಯನ್ನು ಎಷ್ಟು ಚೆನ್ನಾಗಿ ಬೆಳೆಯಬಹುದು ಎಂಬ ಮಾಹಿತಿ ಸಿಗುತ್ತದೆ. ರೈತರ ಬೆಳೆಗೆ ಬೇಕಾದ ರಸಗೊಬ್ಬರ ಮತ್ತಿತರೆ ಪೌಷ್ಟಿಕಾಂಶಗಳ ಮಾಹಿತಿಯನ್ನೂ ಈ ಕಾರ್ಡ್ ನೆರವಿನಿಂದ ಲೆಕ್ಕ ಹಾಕಬಹುದು.

### ಮೇಕ್ ಇನ್ ಇಂಡಿಯಾ

ಭಾರತದ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲೇ ತಮ್ಮ ಉತ್ಪನ್ನಗಳನ್ನು ತಯಾರು ಮಾಡಲೆಂದು ಪ್ರೋತ್ಸಾಹಿಸುವ ಯೋಜನೆಯೇ ಮೇಕ್ ಇನ್ ಇಂಡಿಯಾ. ಭಾರತದಲ್ಲೇ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು 25 ರಂಗಗಳಲ್ಲಿ ಕೌಶಲ್ಯ ಅಭಿವೃದ್ಧಿ ಮಾಡುವುದು ಈ ಯೋಜನೆಯ ಗುರಿಗಳಾಗಿವೆ.

### ಡಿಜಿಟಲ್ ಇಂಡಿಯಾ

ಸಾರ್ವಜನಿಕ ಸೇವೆಗಳ ಸಂಪೂರ್ಣ ವ್ಯವಸ್ಥೆಯನ್ನು ಮಾಹಿತಿ ತಂತ್ರಜ್ಞಾನದ ಮೂಲಕ ನೀಡಲೆಂದು ಆರಂಭಿಸಿರುವ ಡಿಜಿಟಲ್ ಇಂಡಿಯಾ ಉಪಕ್ರಮವು ಭಾರತವನ್ನು ಡಿಜಿಟಲ್ ಶಕ್ತಿಯ ಸಮಾಜವನ್ನಾಗಿ ಮತ್ತು ಜ್ಞಾನ ಆಧಾರಿತ ಆರ್ಥಿಕತೆಯನ್ನಾಗಿ ರೂಪಾಂತರಿಸುವ ಉದ್ದೇಶವನ್ನು ಹೊಂದಿದೆ.

### ಪ್ರಧಾನಮಂತ್ರಿ ಜನ-ಧನ್ ಯೋಜನೆ

ಈ ದೇಶದ ಎಲ್ಲಾ ಮನೆಗಳಿಂದ ಕನಿಷ್ಠ ಒಬ್ಬರು ಬ್ಯಾಂಕ್ ಖಾತೆಯನ್ನು ತೆರೆಯಲು ಪ್ರಧಾನಮಂತ್ರಿ ಜನ-ಧನ್ ಯೋಜನೆಯನ್ನು ಆರಂಭಿಸಲಾಗಿದೆ. ಅನುಕೂಲಗಳು: ಠೇವಣಿ ಮೇಲೆ ಬಡ್ಡಿ; ಠೇವಣಿ ಮೊತ್ತಕ್ಕೆ ಯಾವುದೇ ಮಿತಿ ಇಲ್ಲ; ಒಂದು ರುಪೇ (RuPay) ಡೆಬಿಟ್ ಕಾರ್ಡ್; ಒಂದು ಲಕ್ಷ ರೂ.ಗಳ ಅಪಘಾತ ವಿಮೆ.

### ಎಲ್ಲರಿಗೂ ಮನೆ ಮಿಶನ್ (ನಗರ)

ಸದ್ಯದಲ್ಲೇ ದೇಶದಲ್ಲಿ 1.80 ಕೋಟಿ ಕೊಳಚೆಗೇರಿ ನಿವಾಸಗಳಾಗಲಿವೆ ಎಂದು ಅಂದಾಜು ಮಾಡಲಾಗಿದೆ. ಕೊಳಚೆಯೇತರ ನಗರ ಬಡವರಿಗಾಗಿ 20 ಲಕ್ಷ ಮನೆಗಳನ್ನು ಕಟ್ಟಿಸಿಕೊಡಬೇಕಿದೆ. ಹೀಗೆ ಒಟ್ಟು 2.00 ಕೋಟಿ ಮನೆಗಳನ್ನು ಕಟ್ಟುವುದಕ್ಕೆಂದೇ 'ಎಲ್ಲರಿಗೂ ಮನೆ ಮಿಶನ್' ಉದ್ದೇಶವಾಗಿದೆ.






### ಪಂಡಿತ್ ದೀನದಯಾಳ್ ಅಂತ್ಯೋದಯ ಯೋಜನೆ

ಕೌಶಲ್ಯ ಅಭಿವೃದ್ಧಿ ಮತ್ತು ಇತರೆ ಮಾರ್ಗಗಳ ಮೂಲಕ ಗ್ರಾಮೀಣ ಮತ್ತು ನಗರದ ಬಡವರ ಏಳಿಗೆ ಮಾಡಲು ರೂಪಿಸಿದ ಯೋಜನೆ. ದೇಶದ ಬಹುತೇಕ ಎಲ್ಲಾ ನಗರಗಳಿಗೆ, ಅಂದರೆ 4041 ಶಾಸನಬದ್ಧ ಪಟ್ಟಣ ಮತ್ತು ನಗರಗಳು ಈ ಯೋಜನೆಯಡಿ ಬರುತ್ತವೆ.

## ಮೈಕ್ರೋ ಯೂನಿಟ್ಸ್ ಡೆವಲಪ್‌ಮೆಂಟ್ ಆ್ಯಂಡ್ ರಿಫೈನಾನ್ಸ್ ಏಜೆನ್ಸಿ ಬ್ಯಾಂಕ್ (ಮುದ್ರಾ ಬ್ಯಾಂಕ್)

ಕಿರು ಉದ್ಯಮಗಳ ಹಣಕಾಸು ವ್ಯವಹಾರಗಳಿಗೆ ಸೂಕ್ತವಾದ ನೀತಿ ಸೂತ್ರಗಳನ್ನು ರೂಪಿಸುವುದು; ಇಂಥ ಕಿರು ಉದ್ದಿಮೆ ಸಂಸ್ಥೆಗಳನ್ನು ನೋಂದಾಯಿಸುವುದು, ಮೇಲುಸ್ತುವಾರಿ ಮಾಡುವುದು; ಇವುಗಳಿಗೆ ಮಾನ್ಯತೆ ನೀಡುವುದು; ಯಾವುದೇ ಬಗೆಯ ಋಣಭಾರ ಬಾರದಂತೆ ಹೊಣೆಯರಿತ ಹಣಕಾಸು ಆಚರಣೆಗಳನ್ನು ರೂಪಿಸಿ ಜಾರಿಗೆ ತರುವುದು ಮತ್ತು ಸೂಕ್ತ ಗ್ರಾಹಕ ಸಂರಕ್ಷಣಾ ನೀತಿಗಳನ್ನು, ಹಣ ಮರುಪಾವತಿ ವ್ಯವಸ್ಥೆಗಳನ್ನು ಅಳವಡಿಸುವುದು; ಕಿರು ಉದ್ಯಮಗಳಿಗೆ ಸೂಕ್ತ ತಂತ್ರಜ್ಞಾನಗಳು ಸಿಗುವಂತೆ ಯತ್ನ ಪ್ರಧಾನಮಂತ್ರಿ ಮುದ್ರಾ ಯೋಜನೆ ಅಡಿಯಲ್ಲಿ ಕಿರು ಉದ್ಯಮಗಳಿಗೆ ಬೇಕಾದ ಕೊನೆ ಹಂತದ ಸಾಲ ನೀಡಿಕೆ ಸೌಲಭ್ಯದ ವ್ಯವಸ್ಥೆಯನ್ನು ಕಲ್ಪಿಸುವುದು – ಇವು ಈ ಯೋಜನೆಯ ಮುಖ್ಯಾಂಶಗಳು.

## ಪಂಡಿತ ಮದನ ಮೋಹನ ಮಾಳವೀಯ ರಾಷ್ಟ್ರೀಯ ಶಿಕ್ಷಕರು ಮತ್ತು ತರಬೇತಿ ಮಿಶನ್



ಶಿಕ್ಷಕರು, ಶಿಕ್ಷಣ, ಶಿಕ್ಷಣ ಸಿದ್ಧತೆ, ವೃತ್ತಿಪರ ಬೆಳವಣಿಗೆ, ಪಠ್ಯಕ್ರಮ ವಿನ್ಯಾಸ, ವಿಶ್ಲೇಷಣೆ ಮತ್ತು ಮೌಲ್ಯಮಾಪನ ವ್ಯವಸ್ಥೆ, ಕಲಿಕೆಯ ಸಂಶೋಧನೆ ಮತ್ತು ಪರಿಣಾಮಕಾರಿ ಕಲಿಕಾ ಕ್ರಮಗಳ ಶೋಧ – ಈ ಉದ್ದೇಶಗಳಿಗಾಗಿ ಪಂಡಿತ ಮದನ ಮೋಹನ ಮಾಳವೀಯ ರಾಷ್ಟ್ರೀಯ ಶಿಕ್ಷಕರು ಮತ್ತು ತರಬೇತಿ ಮಿಶನ್ ಆರಂಭಿಸಲಾಗಿದೆ. 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕಾಗಿ 900 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

## ರಾಷ್ಟ್ರೀಯ ಕ್ರೀಡಾ ಪ್ರತಿಭಾ ಶೋಧ ಯೋಜನೆ




ಇದು ರಾಷ್ಟ್ರಮಟ್ಟದ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ದೇಶದ ಪ್ರತಿಭೆಗಳು ಸ್ಪರ್ಧಿಸುವಂತೆ ಮತ್ತು ಮನ್ನಣೆಯನ್ನು ತರುವಂತೆ ಮಾಡಲು ಪ್ರತಿಭಾವಂತ ಕ್ರೀಡಾಳುಗಳನ್ನು ಗುರುತಿಸುವ ಯೋಜನೆ.

## ಪ್ರಧಾನಮಂತ್ರಿ ಕೃಷಿ ಸಿಂಚಾಯೀ ಯೋಜನೆ

ನೀರಾವರಿ ರಂಗದಲ್ಲಿ ವಿವಿಧ ಹೂಡಿಕೆಗಳ ಕ್ರೋಡೀಕರಣ ಮಾಡಿ 2015–2020ರ ಐದು ವರ್ಷಗಳಲ್ಲಿ ಒಟ್ಟು 50 ಸಾವಿರ ಕೋಟಿ ರೂ.ಗಳನ್ನು ವಿನಿಯೋಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಖಚಿತ ನೀರಾವರಿ ಸೌಲಭ್ಯ ನೀಡಿಕೆಯ ಕೃಷಿ ಪ್ರದೇಶವನ್ನು ವಿಸ್ತರಿಸುವುದು (ಪ್ರತೀ ಹೊಲಕ್ಕೂ ನೀರು), ನೀರಿನ ವ್ಯರ್ಥ ಬಳಕೆ ತಗ್ಗಿಸಲು ಹೊಲಗಳಲ್ಲಿ ನೀರಿನ ಬಳಕೆಯ ದಕ್ಷತೆ ಹೆಚ್ಚಿಸುವುದು, ಅತ್ಯಗತ್ಯವಾದ ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ನೀರು ಸಿಗುವಂತೆ ಮಾಡುವ, ಇತರೆ ನೀರು ಸಂರಕ್ಷಣಾ ಕ್ರಮಗಳನ್ನು ಅನುಸರಿಸುವುದು – ಇವು ಈ ಯೋಜನೆಯ ಇತರೆ ಅಂಶಗಳು.

Pradhan Mantri Krishi Sinchayee Yojana (PMKSY)

## ಮಹಾತ್ಮಾ ಗಾಂಧಿ ಪ್ರವಾಸಿ ಸುರಕ್ಷಾ ಯೋಜನೆ

ವಿದೇಶಗಳಲ್ಲಿರುವ ಭಾರತೀಯ ಕಾರ್ಮಿಕರು ತಮ್ಮ ನಿವೃತ್ತಿಯ ನಂತರ, ತಮ್ಮ ವಾಪಸಾತಿಯ ನಂತರದ ಪುನರ್ವಸತಿಗಾಗಿ ಮತ್ತು ನೈಸರ್ಗಿಕ ಕಾರಣಗಳಿಂದ ಸಾವುಂಟಾದರೆ ವಿಮಾ ಸುರಕ್ಷೆಯನ್ನು ಪಡೆಯಲು ಈ ಯೋಜನೆಯನ್ನು ರೂಪಿಸಲಾಗಿದೆ.

## ಡಾ॥ ಶ್ಯಾಮಾಪ್ರಸಾದ್ ಮುಖರ್ಜಿ ರಾಷ್ಟ್ರೀಯ ಗ್ರಾಮೀಣ ಮಿಶನ್



ಸಮಾನತೆ ಮತ್ತು ಸರ್ವಸ್ಪರ್ಶೀ, ಸಾರ್ವತ್ರಿಕ ಭಾಗಿತ್ವದೊಂದಿಗೆ ಭಾರತದ ಗ್ರಾಮಗಳ ಸಮುಚ್ಚಯವನ್ನು ವಿವಿಧ ಸಾಮಾಜಿಕ, ಆರ್ಥಿಕ ಸೌಲಭ್ಯಗಳೊಂದಿಗೆ ಅಭಿವೃದ್ಧಿ ಪಡಿಸುವ ಯೋಜನೆ.

## ನಮಾಮಿ ಗಂಗೆ ಯೋಜನೆ

ಗಂಗಾ ನದಿಯನ್ನು ಸಮಗ್ರ ಕ್ರಮಗಳ ಮೂಲಕ ಶುದ್ಧೀಕರಿಸುವ ಮಹತ್ವದ ಯೋಜನೆಯಿದು. ಈ ಕಾರ್ಯಕ್ಕಾಗಿ ಈಗಾಗಲೇ 2037 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದೆ. ಈಗ ಗಂಗಾ ಶುದ್ಧೀಕರಣಕ್ಕಾಗಿ ನಡೆಯುತ್ತಿರುವ ಎಲ್ಲಾ ಯೋಜನೆಗಳನ್ನೂ ಕ್ರೋಢೀಕರಿಸಿ ಸಮನ್ವಯದಿಂದ ಈ ಉದ್ದೇಶ ಸಾಧಿಸಲಾಗುವುದು.




## ಸ್ವದೇಶ ದರ್ಶನ



ಪ್ರವಾಸೋದ್ಯಮದ ಅಭಿವೃದ್ಧಿಗೆ ರೂಪುಗೊಂಡ ಈ ಯೋಜನೆಯಲ್ಲಿ ಪೂರ್ವಾಂಚಲ ಸರ್ಕ್ಯೂಟ್, ಬೌದ್ಧ ಸರ್ಕ್ಯೂಟ್, ಹಿಮಾಲಯ ಸರ್ಕ್ಯೂಟ್, ಕರಾವಳಿ ಸರ್ಕ್ಯೂಟ್, ಕೃಷ್ಣಾ ಸರ್ಕ್ಯೂಟ್ – ಹೀಗೆ ಐದು ಬಗೆಯ ಪ್ರವಾಸ ಸರಣಿಗಳನ್ನು ರೂಪಿಸಿ ಪ್ರವಾಸಿಗರನ್ನು ಆಕರ್ಷಿಸಲಾಗುತ್ತಿದೆ.

## ಸ್ಕಿಲ್ ಇಂಡಿಯಾ

ಭಾರತದ ಯುವ ಸಮುದಾಯಕ್ಕೆ ಉದ್ಯೋಗಾವಕಾಶ ಸೃಷ್ಟಿಸುವುದು ಈ ಯೋಜನೆಯ ಮಹತ್ವದ ಗುರಿಯಾಗಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಕೌಶಲ್ಯ ತರಬೇತಿ ಕಾರ್ಯಕ್ರಮಗಳು ನಡೆಯುತ್ತಿವೆ.

Skill India
कौशल भारत - कुशल भारत

## ಇಂದ್ರ ಧನುಷ್ ಅಭಿಯಾನ




ಕಾಮನಬಿಲ್ಲಿನ ಏಳು ಬಣ್ಣಗಳನ್ನು ಹೊಂದಿರುವ ಇಂದ್ರ ಧನುಷ್ ಅಭಿಯಾನವು 2020ರ ಹೊತ್ತಿಗೆ ದೇಶದಲ್ಲಿ ಲಸಿಕೆ ಪಡೆಯದ ಎಲ್ಲಾ ಮಕ್ಕಳನ್ನು ಗುರುತಿಸಿ ಏಳು ಬಗೆಯ ಲಸಿಕೆಗಳನ್ನು (ಡಿಫ್ತೀರಿಯಾ, ಕೆಮ್ಮು, ಟೆಟಾನಸ್, ಪೋಲಿಯೋ, ಕ್ಷಯ, ದಢಾರ ಮತ್ತು ಹೆಪಾಟಿಟಿಸ್ ಬಿ) ನೀಡುವ ಯೋಜನೆಯಾಗಿದೆ.

## ಉಡಾನ್ ಕಾರ್ಯಕ್ರಮ

ಜಮ್ಮು ಮತ್ತು ಕಾಶ್ಮೀರ ರಾಜ್ಯದ ಯುವಕರಿಗೆ ಕೌಶಲ್ಯ ತರಬೇತಿ ನೀಡುವ ವಿಶಿಷ್ಟ ಕಾರ್ಯಕ್ರಮ. ಈಗಾಗಲೇ ಈ ಕಾರ್ಯಕ್ರಮದ ಅಡಿಯಲ್ಲಿ 10 ಸಾವಿರ ಯುವಕರು ತರಬೇತಿ ಪಡೆದಿದ್ದು 5 ಸಾವಿರ ಯುವಕರಿಗೆ ಉದ್ಯೋಗ ದೊರಕಿದೆ.

N·S·D·C National Skill Development Corporation
Udaan

## ಪಢೇ ಭಾರತ್ ಬಢೇ ಭಾರತ್



ಮಕ್ಕಳು ಆರಂಭಿಕ ಹಂತದಲ್ಲೇ ಸಂಗ್ರಹ ದಕ್ಷತೆ ಸಾಧಿಸಲು ಓದುವ ಮತ್ತು ಬರೆಯುವ ಹಾಗೂ ಗಣಿತದಲ್ಲಿ ಹೆಚ್ಚಿನ ಗ್ರಹಿಕೆ ಸಾಧಿಸಲು ನೆರವಾಗುವಂತೆ ಮಾಡುವ ಕಾರ್ಯಕ್ರಮ.